ಮೈದಾನದ ನಡುವೆ ಪುಟ್ಟ ಪ್ರೌಢಶಾಲೆ, ರಾಗಿ ಭತ್ತದ ಬೆಳೆಯ ಚಿತ್ರವನ್ನೆಲ್ಲ ಹೇಳಿ, ಇಲ್ಲಿಗೆ ಬಂದದ್ದು ನನಗೆ ಸಂತೋಷವಾಗುತ್ತಿದೆ ಎಂದೆ. ನನ್ನದು ದಕ್ಷಿಣ ಕರ್ನಾಟಕದ ಮಳೆಯ ಆರ್ಭಟದ ಅರಣ್ಯಸೀಮೆ. ಇದು ಕೊಂಚ ಬಿಸಿಲಿನ ಬಯಲು ಸೀಮೆ ಎನ್ನಲು ಕೃಷ್ಣಶಾಸ್ತ್ರಿಗಳು ಆ ಪ್ರದೇಶದ ಜನಜೀವನ ಕ್ರಮದ, ಕಾಡುಗೊಲ್ಲ ಮತ್ತು ಮ್ಯಾಸಬೇಡರ ಬುಡಕಟ್ಟು ವಿವರಗಳನ್ನು ಹೇಳತೊಡಗಿದರು. ಆ ಮಧ್ಯೆ ಅಪ್ಪಿತಪ್ಪಿಯೂ ತಮ್ಮ ವೈಯಕ್ತಿಕ ವಿವರಗಳನ್ನು ಪ್ರಸ್ತಾಪಿಸಲಿಲ್ಲ. ನನ್ನ ಊರು, ಕೇರಿ, ತಂದೆತಾಯಿ, ಕುಲಗೋತ್ರಗಳನ್ನೂ ಸಹ ಕೇಳಲಿಲ್ಲ. ಆಮೇಲೂ ಮೂವತ್ತು, ನಲವತ್ತು ವರ್ಷಗಳ ನಡುವೆ ಎಂದೂ ನನ್ನ ಜಾತಿ, ಮತ ಕುರಿತು ಅವರು ವಿಚಾರ ಮಾಡಲಿಲ್ಲ.

ಬೆಳಗೆರೆ ಕೃಷ್ಣಶಾಸ್ತ್ರಿಗಳು ಇನ್ನೇನು ಹೊತ್ತು ಮುಳುಗುತ್ತಿದೆ ಎನ್ನುವಾಗ್ಗೆ ಬನ್ನಿ ಇಲ್ಲೇ ಒಂದೆರಡು ಮೈಲು ದೂರದಲ್ಲಿ ಒಂದು ಹಟ್ಟಿ ಇದೆ. ಅಲ್ಲಿ ಸಿರಿಯಜ್ಜಿ ಅಂತ ಒಬ್ಬ ಹಾಡುಗಾರ್ತಿ ಇದ್ದಾಳೆ ನೋಡಿ ಬರುವ ಎಂದರು. ಅವಳು ಅಲ್ಲಿ ಇಲ್ಲಿ ಮದುವೆಯ ಸಂದರ್ಭ ಹಾಡುವುದನ್ನು ಕೇಳಿದ್ದೇನೆಂದರು. ಶಾಸ್ತ್ರಿಗಳು ಆ ಸುತ್ತಿನ ಎಲ್ಲ ಜಾತಿಮತದವರ ಮದುವೆಗಳಿಗೆ ಸಂತೋಷದಿಂದಲೇ ಹಾಜರಾಗುತ್ತಿದ್ದರು. ಸುತ್ತಮುತ್ತಣ ಶಾಲಾಕಾಲೇಜುಗಳ ಕಾರ್ಯಕ್ರಮಕ್ಕೆ ಹೋಗುತ್ತಿದ್ದರು.

ಒಮ್ಮೆ ಚಳ್ಳಕೆರೆ ಬಳಿಯ ಪರಶುರಾಮಪುರದಲ್ಲಿ ಅಲ್ಲಿಯ ಸಾಹಿತ್ಯಾಸಕ್ತರಿಗಾಗಿ ಒಂದು ಕಾರ್ಯಕ್ರಮವಿದ್ದಿತು. ಅಲ್ಲಿಗೆ ನಾನೂ ಕೃಷ್ಣಶಾಸ್ತ್ರಿಗಳು ಹೋಗಿದ್ದೆವು. ಉಪನ್ಯಾಸ ಮಾಡಬೇಕಿದ್ದುದು ಕುವೆಂಪು ಅವರ ಶ್ರೀರಾಮಾಯಣದರ್ಶನಂ ಮೇಲೆ. ಕೃಷ್ಣಶಾಸ್ತ್ರಿಗಳು ಕುವೆಂಪು ಅವರ ಮಹಾಕಾವ್ಯ ಕುರಿತು ಮಾತನಾಡಿದರು. ಆಶ್ಚರ್ಯವೆಂದರೆ ಅವರ ಎರಡು ಗುಡಿಸಲುಗಳಲ್ಲಿ ಎಲ್ಲಿಯೂ ಪುಸ್ತಕವಿರಲಿಲ್ಲ. ಆದರೆ ಕುವೆಂಪು ರಾಮಾಯಣದರ್ಶನಂ ಮಾತ್ರವಲ್ಲ ಲಕ್ಷ್ಮೀಶನ ಜೈಮಿನಿಭಾರತ, ಕುಮಾರವ್ಯಾಸನ ಕರ್ಣಾಟಭಾರತ ಕಥಾಮಂಜರಿಯ ಪದ್ಯಗಳು, ಪಂಪ ರನ್ನರ ಕಾವ್ಯಭಾಗಗಳ ವಿಚಾರಗಳೆಲ್ಲವೂ ಅವರಿಗೆ ಮನೋಗತವಾಗಿದ್ದಂತೆ ತೋರಿತು.

ಸಿರಿಯಜ್ಜಿಯ ಊರು ಯಲಕಟ್ಟೆ ಗೊಲ್ಲರಟ್ಟಿ. ಯಾವ್ಯಾವ ಗೊಲ್ಲರಹಟ್ಟಿಗಳು ಯಾವ ಗ್ರಾಮದ ಬಳಿ ಇರುತ್ತವೋ ಆಯಾ ಗೊಲ್ಲರ ಹಟ್ಟಿಗೆ ಆಯಾಗ್ರಾಮದ ಹೆಸರು ಇರುತ್ತಿತ್ತು. ಈ ಮಾದರಿಯ ಹಟ್ಟಿಗಳನ್ನು ನಾನು ದಕ್ಷಿಣ ಕರ್ನಾಟಕ ಭಾಗದಲ್ಲಿ ನೋಡಿರಲೇ ಇಲ್ಲ. ಗೊಲ್ಲರಹಟ್ಟಿ ಎಂದರೆ ಕೇವಲ ನಲವತ್ತು, ಐವತ್ತು ಗುಡಿಸಲುಗಳ ಸಮೂಹ, ಒಂದೋ ಎರಡೋ ಮಾಳಿಗೆ ಮನೆ. ಮಾಳಿಗೆ ಮನೆ ಎಂದರೆ ಮಹಡಿಮನೆಯಲ್ಲ. ಗೋಡೆಯ ಮೇಲೆ ಮಣ್ಣಿನ ತಾರಸಿ ಹಾಕಿ ಕಟ್ಟಿದಮನೆ. ಆ ಹಟ್ಟಿಯ ಎಲ್ಲರೂ ಸಿರಿಯಣ್ಣ, ಸಿರಿಯಪ್ಪ, ಸಿರಿಯ, ಸಿರಿಯಜ್ಜ, ಸಿರಿ, ಸಿರಿಯಮ್ಮ, ಸಿರಿಯಕ್ಕ, ಸಿರಿಯಜ್ಜಿ, ಹೀಗೆ ತಂತಮ್ಮನ್ನು ಕರೆದುಕೊಳ್ಳುತ್ತಿದ್ದರು. ಕೊನೆಗೆ ಆ ಹಟ್ಟಿಯ ದೇವರೂ ಸಿರಿಯಣ್ಣನೇ ಆಗಿದ್ದನು. ಆಮೇಲಿನ ಮಾಹಿತಿ ಸಂಗ್ರಹದ ಪ್ರಕಾರ ಒಂದೆರಡು ಶತಮಾನಗಳ ಹಿಂದೆ ಸಿರಿಯಣ್ಣನು ಪಶುಪಾಲಕನಾಗಿದ್ದವನು. ಪಶುಗಳನ್ನು ರಕ್ಷಿಸುವಲ್ಲಿ ಹತನಾದ ವೀರ. ಅಂಥ ಅನೇಕ ವೀರರನ್ನು ಕಾಡುಗೊಲ್ಲರು ತಮ್ಮ ಹಟ್ಟಿಯ ನಡುವೆ ಪ್ರತಿಷ್ಠಾಪಿಸಿಕೊಂಡು ಆರಾಧ್ಯದೈವಗಳನ್ನಾಗಿ ಮಾಡಿಕೊಂಡಿದ್ದರು. ಅದರಲ್ಲಿ ಕಾಡುಗೊಲ್ಲರ ಅಧಿದೈವ ಜುಂಜಪ್ಪನಾಗಿದ್ದ.

ಸಿರಿಯಜ್ಜಿಯ ಹಟ್ಟಿಗೆ ಒಂದು ಕಡೆ ಮಾತ್ರ ಪ್ರವೇಶವಿದ್ದಿತು. ಅಂದರೆ ಆ ನಲವತ್ತು ಐವತ್ತು ಗುಡಿಸಲುಗಳ ಸುತ್ತ ಮುಳ್ಳುಬೇಲಿ ಇದ್ದು, ಒಂದು ಕಡೆ ಬಾಗಿಲಿದ್ದಿತು. ಸಾಮಾನ್ಯವಾಗಿ